| | | | |
|---|---|---|---|
| | | | ಇಪ್ಪತ್ತು ಸಾವಿರ ಮಾತ್ರಗಳಲ್ಲಿ )ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯ ಆಡಳಿತ ವೆಚ್ಚದಡಿಯಲ್ಲಿ ನಿಯಮಾನುಸಾರ ಖರೀದಿಸಲು ಅನುಮೋದನೆಯನ್ನು ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.<br>10. ವಲಯ ಅರಣ್ಯಾಧಿಕಾರಿಗಳ ಕಛೇರಿ, ಸಾಮಾಜಿಕ ಅರಣ್ಯ ವಲಯ, ಸಕಲೇಶಪುರ ಇಲ್ಲಿಗೆ ಅವಶ್ಯವಿರುವ 6 1/2 ಅಡಿ ಎತ್ತರದ ಆಫೀಸ್ ಅಲ್ಮೇರಾವನ್ನು ದರಪಟ್ಟಿದಾರರಲ್ಲಿ ಕಡಿಮೆ ದರ ನಮೂದಿಸಿರುವ ಶ್ರೀ ಗಗನ್ ಫರ್ನಿಚರ್ಸ್, ಒಕ್ಕಲಿಗರ ಹಾಸ್ಟೆಲ್ ಬಿಲ್ಡಿಂಗ್, ಶಂಕರಮಠ ರಸ್ತೆ, ಹಾಸನ ಇವರಿಂದ ರೂ.9000/-(ರೂಪಾಯಿ ಒಂಬತ್ತು ಸಾವಿರ ಮಾತ್ರ)ಗಳಲ್ಲಿ ಸಾಮಾಜಿಕ ಅರಣ್ಯ ಯೋಜನೇತರದಡಿ ಲಭ್ಯವಿರುವ ಅನುದಾದಲ್ಲಿ ನಿಯಮಾನುಸಾರ ಖರೀದಿಸಲು ಅನುಮೋದನೆಯನ್ನು ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| | ಮತ್ಯಾವುದೇ ವಿಷಯಗಳು ಚರ್ಚೆಗೆ ಬಾರದ ಹಿನ್ನೆಲೆಯಲ್ಲಿ ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು. | | |

(ಹುಚ್ಚೇಗೌಡ)
ಅಧ್ಯಕ್ಷರು,
ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ,
ಜಿಲ್ಲಾ ಪಂಚಾಯಿತಿ, ಹಾಸ

| | | | |
|---|---|---|---|
| | | ತಾಲ್ಲೂಕು ಪಂಚಾಯಿತಿ ಸದಸ್ಯರುಗಳ ಮನವಿ ಸಲ್ಲಿಸಿದವರಿಗೆ ಹಾಗೂ ಆಸಕ್ತ ರೈತರಿಗೆ ಅನುಮೋದನೆಗಾಗಿ ಆದೇಶದ ಪ್ರಕಾರ ಹಾಗೂ ಉಚಿತವಾಗಿ ವಿತರಣೆ ಮಾಡಲು ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಿದ್ದಪಡಿಸಿ ಸಲ್ಲಿಸಿರುತ್ತಾರೆ. | ಮಾತ್ರ)ಗಳಲ್ಲಿ ಸಾಮಾಜಿಕ ಅರಣ್ಯ ಯೋಜನೇತರದಡಿ ಲಭ್ಯವಿರುವ ಅನುದಾನ ದಲ್ಲಿ ಖರೀದಿಸಲು ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸ ಲಾಯಿತು.<br>5. ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಸಾಮಾಜಿಕ ಅರಣ್ಯ ವಿಭಾಗ, ಹಾಸನ ಇಲ್ಲಿಗೆ ಅವಶ್ಯವಿರುವ ಲ್ಯಾಪ್‌ಟಾಪ್ ಅನ್ನು ದರಪಟ್ಟಿದಾರರಲ್ಲಿ ಕಡಿಮೆ ದರ ನಮೂದಿಸಿರುವ ಎಕ್ಸ್‌ಟೆಲಿಜೆನ್ಸ್ ಸಿಸ್ಟಮ್ಸ್, ಸಾಲಗಾಮೆ ರಸ್ತೆ, ಹಾಸನ ಇವರಿಂದ ರೂ.55000/-(ರೂಪಾಯಿ ಐವತ್ತೈದು ಸಾವಿರ ಮಾತ್ರ)ಗಳಲ್ಲಿ ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯ ಆಡಳಿತ ವೆಚ್ಚದಲ್ಲಿ ಭರಿಸಿ ನಿಯಮಾನುಸಾರ ಖರೀದಿಸಲು ಅನುಮೋದನೆ ಯನ್ನು ನೀಡಲು ಸಭೆಯಲ್ಲಿ ಸರ್ವಾನುಮತ ದಿಂದ ನಿರ್ಣಯಿಸಲಾಯಿತು.<br>6. ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಸಾಮಾಜಿಕ ಅರಣ್ಯ ವಿಭಾಗ, ಹಾಸನ ಇಲ್ಲಿಗೆ 2*4 ಅಳತೆಯ 2 ಕಂಪ್ಯುಟರ್ ಟೇಬಲ್ ಮತ್ತು 2 ಕುರ್ಚಿಗಳನ್ನು ದರಪಟ್ಟಿದಾರರಲ್ಲಿ ಕಡಿಮೆ ದರ ನಮೂದಿಸಿರುವ ಶ್ರೀ ಗಗನ್ ಫರ್ನಿಚರ್ಸ್, ಒಕ್ಕಲಿಗರ ಹಾಸ್ಟೆಲ್ ಬಿಲ್ಡಿಂಗ್, ಶಂಕರಮಠ ರಸ್ತೆ, ಇವರಿಂದ ರೂ.18000/- (ರೂಪಾಯಿ ಹದಿನೆಂಟು ಸಾವಿರ ಮಾತ್ರ)ಗಳಲ್ಲಿ ಸಾಮಾಜಿಕ ಅರಣ್ಯ ವಿಭಾಗದ ಯೋಜನೇತರ ದಡಿಯಲ್ಲಿ ಲಭ್ಯವಿರುವ ಅನುದಾನದಲ್ಲಿ ನಿಯಮಾನುಸಾರ ಖರೀದಿಸಲು ಅನುಮೋದನೆಯನ್ನು ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.<br>7. 2012-13ನೇ ಸಾಲಿನಲ್ಲಿ ಎಂಜಿಎನ್‌ಆರ್‌ಇಜಿಎ ಯೋಜನೆಯಡಿ 10.00ಲಕ್ಷ ಸಸಿ ಬೆಳೆಸುವ ಗುರಿ ಹೊಂದಿದ್ದು, ಸದರಿ ಸಸಿಗಳನ್ನು ಬೆಳೆಸಲು ಪಾಲಿಥೀನ್ ಚೀಲಗಳನ್ನು ರೂ.1760063/-(ರೂಪಾಯಿ ಹದಿನೇಳು ಲಕ್ಷದ ಅರವತ್ತು ಸಾವಿರದ ಅರವತ್ತ ಮೂರು ಮಾತ್ರ)ಗಳಲ್ಲಿ ಎಂಜಿಎನ್‌ಆರ್‌ಇಜಿಎ ಯೋಜನೆಯಡಿ ಲಭ್ಯವಿರುವ ಅನುದಾನದಲ್ಲಿ ನಿಯಮಾನುಸಾರ ಖರೀದಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.<br>8. ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಸಾಮಾಜಿಕ ಅರಣ್ಯ ವಿಭಾಗ, ಹಾಸನ ಇವರ ವತಿಯಿಂದ 2011-12ನೇ ಸಾಲಿನಲ್ಲಿ ಬೆಳೆಸಿರುವ 12.40ಲಕ್ಷ ಸಸಿಗಳಲ್ಲಿ ಜಾಬ್‌ಕಾರ್ಡ್ ಹೊಂದಿರುವ ಫಲಾನುಭವಿಗಳಿಗೆ ಹಂಚಿಕೆ ಮಾಡಿ ಉಳಿತಾಯವಾಗುವ ಸಸಿಗಳನ್ನು ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ, ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯಿತಿ ಸದಸ್ಯರುಗಳ ಮನವಿ ಸಲ್ಲಿಸಿದವರಿಗೆ ಹಾಗೂ ಆಸಕ್ತ ರೈತರಿಗೆ ಸರ್ಕಾರದ ಆದೇಶದ ಪ್ರಕಾರ ಹಾಗೂ ಉಚಿತವಾಗಿ ವಿತರಣೆ ಮಾಡಲು ಅನುಮೋದನೆಯನ್ನು ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.<br>9. ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಸಾಮಾಜಿಕ ಅರಣ್ಯ ಉಪ ವಿಭಾಗ, ಹಾಸನ ಇಲ್ಲಿಗೆ ಚೇಂಬರ್ ವುಡನ್ ಸ್ಕ್ರೀನ್ ಅನ್ನು ದರಪಟ್ಟಿದಾರರಲ್ಲಿ ಕಡಿಮೆ ದರ ನಮೂದಿಸಿರುವ ಜಬಿ ಹ್ಯಾಂಡಿಕ್ರಾಫ್ಟ್ ಎಕ್ಸ್‌ಪೋರ್ಟ್ಸ್, ಮೈಸೂರು ಇವರಿಂದ ರೂ.20000/-(ರೂಪಾಯಿ |

| | | | |
|---|---|---|---|
| | | ಶಿವಜ್ಯೋತಿ ನಗರ, ಹಾಸನ ಇವರ ಖಾಸಗಿ ವಾಹನವನ್ನು ಮಾಸಿಕ ರೂ.19500/-ಗಳಿಗೆ ಬಾಡಿಗೆ ಆಧಾರದ ಮೇಲೆ ಪಡೆಯಲಾಗಿದ್ದು, 2012-13ನೇ ಸಾಲಿಗೆ ಸದರಿ ವಾಹನವನ್ನು ಅರಣ್ಯ ಮತ್ತು ತೋಟಗಾರಿಕೆ ಘಟಕಗಳ ಕ್ಷೇತ್ರ ವೀಕ್ಷಣೆಗಾಗಿ ಪಡೆಯಲು ಮಂಜೂರಾತಿಯನ್ನು ನೀಡುವಂತೆ ಕೋರಿರುತ್ತಾರೆ. | ತೋಟಗಾರಿಕೆ ಘಟಕಗಳ ಕ್ಷೇತ್ರ ವೀಕ್ಷಣೆಗಾಗಿ ಪಡೆಯಲು ಮಂಜೂರಾತಿಯನ್ನು ನವೀಕರಿಸಿ ಮುಂದುವರೆಸಲು ಸಭೆಯಲ್ಲಿ ಚರ್ಚಿಸಿ ಸರ್ವಾನುಮತದಿಂದ ಒಪ್ಪಿ ನಿರ್ಣಯಿಸಲಾಯಿತು. |
| **4. ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು** | | | |
| 1 | ಸಾಮಾಜಿಕ ಅರಣ್ಯ ವಿಭಾಗದ ಇಲಾಖೆಯ ಪ್ರಸ್ತಾವನೆಗೆ ಅನುಮೋದನೆ ನೀಡುವ ಬಗ್ಗೆ | ಟಿಪ್ಪಣಿ ಸಂಖ್ಯೆ: ಜಿಪಂಹಾ/ಅಭಿ(3) ಸಾ.ಅರಣ್ಯ/2012-13 ದಿ: 26-06-2012ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಹಾಸನರವರು ವಿಭಾಗ ಕಛೇರಿ ಮತ್ತು ವಲಯ ಅರಣ್ಯಾಧಿಕಾರಿ, ಸಾಮಾಜಿಕ ಅರಣ್ಯ ವಲಯ, ಸಕಲೇಶಪುರ ಕಛೇರಿಗೆ 6 1/2 ಅಡಿ ಎತ್ತರದ ಆಫೀಸ್ ಅಲ್ಮೇರಾ, ವಿಭಾಗ ಕಛೇರಿ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿಯ ಕಿಟಕಿ ಸ್ಕ್ರೀನ್, ಎಂಟು ತಾಲ್ಲೂಕುಗಳ ಕ್ಷೇತ್ರ ತಪಾಸಣೆ ಮಾಡಲು ಎಂಟು ಜಿ.ಪಿ.ಎಸ್ (150 ಎ.ಹೆಚ್) ಯು.ಪಿ.ಎಸ್ ಬ್ಯಾಟರಿ, ಲ್ಯಾಪ್‌ಟಾಪ್, 2.4 ಅಳತೆಯ 2 ಕಂಪ್ಯೂಟರ್ ಟೇಬಲ್, ವಿಭಾಗ ಕಛೇರಿಗೆ ಚೇಂಬರ್ ವುಡನ್ ಸ್ಕ್ರೀನ್, 3 ಡಿಜಿಟಲ್ ಕ್ಯಾಮರಾ (ಹ್ಯಾಂಡಿಕ್ಯಾಂ), 2012-13ನೇ ಸಾಲಿನಲ್ಲಿ ಎಂಜಿಎನ್‌ಆರ್‌ಇಜಿಎ ಯೋಜನೆಯಡಿ 10.00ಲಕ್ಷ ಸಸಿ ಬೆಳೆಸುವ ಗುರಿ ಹೊಂದಿದ್ದು, ಸದರಿ ಸಸಿಗಳನ್ನು ಬೆಳೆಸಲು ಪಾಲಿಥೀನ್ ಚೀಲಗಳ ಖರೀದಿ ವೆಚ್ಚ ಮತ್ತು 2011-12ನೇ ಸಾಲಿನಲ್ಲಿ ಬೆಳೆಸಿರುವ 12.40 ಲಕ್ಷಗಳ ಸಸಿಗಳಲ್ಲಿ ಜಾಬ್‌ಕಾರ್ಡ್ ಹೊಂದಿರುವ ಫಲಾನುಭವಿಗಳಿಗೆ ಹಂಚಿಕೆ ಮಾಡಿ ಉಳಿತಾಯವಾಗುವ ಸಸಿಗಳನ್ನು ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ ಜಿಲ್ಲಾ ಪಂಚಾಯತ್ ಮತ್ತು | ಸಭೆಯಲ್ಲಿ ಸಾಮಾಜಿಕ ಅರಣ್ಯ ವಿಭಾಗದ ಪ್ರಸ್ತಾವನೆಗಳ ಬಗ್ಗೆ ಸಮಗ್ರವಾಗಿ ಪರಿಶೀಲಿಸಿ ಈ ಕೆಳಕಂಡಂತೆ ನಿರ್ಣಯಿಸಲಾಯಿತು.<br>1. ಹಾಸನ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿಗೆ ಸಾಮಾಜಿಕ ಅರಣ್ಯ ವಿಭಾಗ, ಇಲ್ಲಿಗೆ 6 1/2 ಅಡಿ ಎತ್ತರದ ಆಫೀಸ್ ಅಲ್ಮೇರಾ (4 ಸಂಖ್ಯೆ) ಇವುಗಳನ್ನು ದರಪಟ್ಟಿಯಲ್ಲಿ ಕಡಿಮೆ ದರ ನಮೂದಿಸಿರುವ ಶ್ರೀ ಗಗನ್ ಫರ್ನಿಚರ್ಸ್, ಒಕ್ಕಲಿಗರ ಹಾಸ್ಟೆಲ್ ಬಿಲ್ಡಿಂಗ್, ಶಂಕರಮಠ ರಸ್ತೆ, ಇವರಿಂದ ರೂ.34000/-(ರೂಪಾಯಿ ಮೂವತ್ತನಾಲ್ಕು ಸಾವಿರ ಮಾತ್ರ)ಗಳಲ್ಲಿ ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯಡಿ ಆಡಳಿತ ವೆಚ್ಚದಲ್ಲಿ ಲಭ್ಯವಿರುವ ನಿಯಮಾನು ಸಾರ ಖರೀದಿಸಲು ಸಭೆಯಲ್ಲಿ ಸರ್ವಾನುಮತ ದಿಂದ ನಿರ್ಣಯಿಸಲಾಯಿತು.<br>2. ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಸಾಮಾಜಿಕ ಅರಣ್ಯ ವಿಭಾಗ, ಹಾಸನ ಇಲ್ಲಿಗೆ ಕಿಟಕಿಯ ಸ್ಕ್ರೀನ್ ಅನ್ನು ದರಪಟ್ಟಿಯಲ್ಲಿ ಕಡಿಮೆ ದರ ನಮೂದಿಸಿರುವ ಕಿಂಗ್ ಫರ್ನಿಚರ್ಸ್, ಸಿಟಿಪಾಂಟ್ ಕಾಂಪ್ಲೆಕ್ಸ್, ಬಿ.ಎಂ.ರಸ್ತೆ, ಹಾಸನ ಇವರಿಂದ ರೂ.21000/- (ರೂಪಾಯಿ ಇಪ್ಪತ್ತೊಂದು ಸಾವಿರ ಮಾತ್ರ)ಗಳಲ್ಲಿ ನಿಯಮಾನುಸಾರ ಸಾಮಾಜಿಕ ಅರಣ್ಯ ಯೋಜನೇತರದಡಿಯಲ್ಲಿ ಲಭ್ಯವಿರುವ ಅನುದಾನದಲ್ಲಿ ಖರೀದಿಸಲು ಅನುಮೋದನೆ ಯನ್ನು ನೀಡಲು ಸಭೆಯಲ್ಲಿ ಸರ್ವಾನುಮತ ದಿಂದ ನಿರ್ಣಯಿಸಲಾಯಿತು.<br>3. ಹಾಸನ ಸಾಮಾಜಿಕ ಅರಣ್ಯ ವಿಭಾಗ, ಕಛೇರಿಗೆ ಎಂಟು ಜಿ.ಪಿ.ಎಸ್ 72 ಹೆಚ್ ಗಳನ್ನು ದರಪಟ್ಟಿದಾರರಲ್ಲಿ ಕನಿಷ್ಠ ದರ ನಮೂದಿಸಿರುವ ಬೆಂಗಳೂರು ಸರ್ವೆ ಇನ್ಸ್ಟ್ರುಮೆಂಟ್ ಕಂ. ಬೆಂಗಳೂರು ಇವರಿಂದ ರೂ.80000/-(ರೂಪಾಯಿ ಎಂಬತ್ತು ಸಾವಿರ ಮಾತ್ರ)ಗಳಲ್ಲಿ ಸಾಮಾಜಿಕ ಅರಣ್ಯ ವಿಭಾಗ ಯೋಜನೇತರ ಲೆಕ್ಕಶೀರ್ಷಿಕೆಯಡಿ ಲಭ್ಯವಿರುವ ಅನುದಾನದಲ್ಲಿ ನಿಯಮಾನುಸಾರ ಖರೀದಿಸಲು ಅನುಮೋದನೆಯನ್ನು ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.<br>4. ಉಪ ಅರಣ್ಯ ಸಂರಕ್ಷಣಾಧಿಕಾರಿಯವ ಕಛೇರಿಗೆ, 150 ಎ.ಹೆಚ್. ಯು.ಪಿ.ಎಸ್ ಬ್ಯಾಟರಿ (ಸಂಖ್ಯೆ:3) ದರಪಟ್ಟಿದಾರರಲ್ಲಿ ಕಡಿಮೆ ದರ ನಮೂದಿಸಿರುವ ಎಕ್ಸ್‌ಟೆಲಿಜೆನ್ಸ್ ಸಿಸ್ಟಮ್ಸ್, ಸಾಲಗಾಮೆ ರಸ್ತೆ, ಹಾಸನ ಇವರಿಂದ ರೂ.40000/-(ರೂಪಾಯಿ ನಲವತ್ತು ಸಾವಿರ |

| ಕ್ರಸಂ | ಲೆಕ್ಕಶೀರ್ಷಿಕೆ ಮತ್ತು ಯೋಜನೆ / ಕಾರ್ಯಕ್ರಮದ ಹೆಸರು | ನಿಗದಿತ ಅನುದಾನ (ಲಕ್ಷ ರೂಗಳಲ್ಲಿ) |
|---|---|---|
| 1 | 2425-00-101-0-28-ವಿವಿಧ ವರ್ಗದ ಸಹಕಾರ ಸಂಘಗಳಿಗೆ ಸಹಾಯಧನ | 1.50 |
| 2 | 2425-00-101-0-30 ಹಾಲು ಉತ್ಪಾದನಾ ಮಹಿಳಾ ಸಹಕಾರ ಸಂಘಗಳಿಗೆ ಮೂಲಭೂತ ಸೌಕರ್ಯ ಒದಗಿಸಲು ಸಹಾಯಧನ | 1.50 |
| 3 | 2425-00-101-0-25 ವಿವಿಧ ವರ್ಗದ ಸಹಕಾರ ಸಂಘಗಳಿಗೆ ಷೇರು ಬಂಡವಾಳ | 2.00 |
| | ಒಟ್ಟು | 5.00 |

| | | | |
|---|---|---|---|
| 2 | ಆಸ್ಪತ್ರೆ ಮತ್ತು ಔಷಧಾಲಯಗಳು ಲೆಕ್ಕಶೀರ್ಷಿಕೆಯಡಿ ಪಶು ಸಂಸ್ಥೆಗಳಲ್ಲಿನ ದಿನ ನಿತ್ಯದ ಚಿಕಿತ್ಸೆಗೆ ಅವಶ್ಯಕ ಜೀವರಕ್ಷಕ ಔಷಧಗಳನ್ನು ಪೂರೈಸಲು ಅನುಮೋದನೆ ನೀಡುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಅಭಿ(3)/ಪಶುಪಾಲನೆ/ 2012-13 ದಿನಾಂಕ: 26-06-2012ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಉಪ ನಿರ್ದೇಶಕರು, ಪಶುಪಾಲನಾ ಇಲಾಖೆ, ಜಿಲ್ಲಾ ಪಂಚಾಯಿತಿ, ಹಾಸನ ಇವರು 2012-13ನೇ ಸಾಲಿನ ಜಿಲ್ಲಾ ಪಂಚಾಯತ್ ಯೋಜನಾ ಕಾರ್ಯಕ್ರಮಗಳ ಲೆಕ್ಕಶೀರ್ಷಿಕೆ 2403-00-101-027 ಆಸ್ಪತ್ರೆಗಳು ಮತ್ತು ಔಷಧಾಲಯಗಳು ಇದರಡಿ ರೂ.50.00ಲಕ್ಷ ನಿಗದಿಯಾಗಿದ್ದು, ಪಶು ಸಂಸ್ಥೆಗಳಲ್ಲಿನ ದಿನ ನಿತ್ಯದ ಚಿಕಿತ್ಸೆಗೆ ಅವಶ್ಯಕ ಜಿವರಕ್ಷಕ ಔಷಧಗಳನ್ನುಪೂರೈಸಲು ಕ್ರಿಯಾ ಯೋಜನೆ ರೂಪಿಸಿದ್ದು, ಮೊದಲನೇ ಅರ್ಧ ವಾರ್ಷಿಕಕ್ಕೆ ಅವಶ್ಯವಿರುವ ಜೀವರಕ್ಷಕ ಔಷಧಿಗಳನ್ನು ಪ್ರಸ್ತುತ ಲಭ್ಯವಾಗುವ ಅನುದಾನ ರೂ.24,17,458.00ಗಳ ವೆಚ್ಚದಲ್ಲಿ ಇಲಾಖೆಯು ನಿಗದಿಪಡಿಸಿದ ದರಗುತ್ತಿಗೆ ಹೊಂದಿದ ಸಂಸ್ಥೆಗಳಿಂದ ಖರೀದಿಸಿ ಸರಬರಾಜು ಮಾಡಲು ಅನುಮೋದನೆ ನೀಡುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಉಪ ನಿರ್ದೇಶಕರು, ಪಶುಪಾಲನಾ ಇಲಾಖೆ, ಹಾಸನ ಇವರು ಕೋರಿರುವಂತೆ ಪ್ರಸ್ತಾವನೆಗೆ ಅನುಮೋದನೆಯನ್ನು ನೀಡಲಾಯಿತು.<br>1. **ಆಸ್ಪತ್ರೆ ಮತ್ತು ಔಷಧಾಲಯಗಳು ಲೆಕ್ಕಶೀರ್ಷಿಕೆಯಡಿ ಜೀವರಕ್ಷಕ** ಔಷಧಗಳ ಪೂರೈಕೆಗೆ ಸಂಬಂಧಿಸಿದಂತೆ, ರೂ.2417458.00 (ರೂಪಾಯಿ ಇಪ್ಪತ್ತನಾಲಕ್ಕು ಲಕ್ಷದ ಹದಿನೇಳು ಸಾವಿರದ ನಾಲ್ಕುನೂರ ಐವತ್ತೆಂಟುಮಾತ್ರ) ಗಳಲ್ಲಿ ಆಯುಕ್ತಾಲಯದಿಂದ ನಿಗದಿಪಡಿಸಿದ ದರಗುತ್ತಿಗೆ ಸಂಸ್ಥೆಗಳಿಂದ ಹಾಗೂ ಭಾರತ ಸರ್ಕಾರದ ಸ್ವಾಮ್ಯದ ಸಂಸ್ಥೆಯಿಂದ ದರಪಟ್ಟಿ ಮುಖೇನ ಅವಶ್ಯ ಔಷಧಿಗಳನ್ನು ನಿಯಮಾ ನುಸಾರ ಖರೀದಿಸಲು ಮಂಜೂರಾತಿ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |
| 3 | ಜಲಾನಯನ ಇಲಾಖೆಯ ಪ್ರಸ್ತಾವನೆಗಳಿಗೆ ಅನುಮೋದನೆ ನೀಡುವ ಬಗ್ಗೆ | ಟಿಪ್ಪಣಿ ಸಂಖ್ಯೆ: ಜಿಪಂಹಾ/ಅಭಿ(3)ಜಲಾನಯನ/201-13 ದಿನಾಂಕ: 22-06-2012ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಯವರು ಪ್ರಸ್ತಾವನೆಯನ್ನು ಸಲ್ಲಿಸಿ ಅರಣ್ಯ ಮತ್ತು ತೋಟಗಾರಿಕೆ ಘಟಕದ ಕ್ಷೇತ್ರ ವೀಕ್ಷಣೆಗಾಗಿ 2011-12ನೇ ಸಾಲಿಗೆ ಶ್ರೀ ಲಕ್ಷ್ಮೀ ವೆಂಕಟೇಶ್ವರ ಟ್ರಾವೆಲ್ಸ್, | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಪರಿಶೀಲಿಸಲಾಯಿತು.<br>ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಯವರು ಕೋರಿರುವಂತೆ ಶ್ರೀ ಲಕ್ಷ್ಮೀ ವೆಂಕಟೇಶ್ವರ ಟ್ರಾವೆಲ್ಸ್, ಶಿವಜ್ಯೋತಿ ನಗರ, ಹಾಸನ ಇವರ ಖಾಸಗಿ ವಾಹನವನ್ನು ಮಾಸಿಕ ರೂ.19500/-ಗಳಿಗೆ ಬಾಡಿಗೆ ಆಧಾರದ ಮೇಲೆ ಪಡೆದು ಬಳಕೆ ಮಾಡುತ್ತಿರುತ್ತಾರೆ. 2012-13ನೇ ಸಾಲಿಗೂ ಅರಣ್ಯ ಮತ್ತು |

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಘಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಅರ್ಹ ಫಲಾನುಭವಿಗಳಿಗೆ ಆರ್ಥಿಕ ಸೌಲಭ್ಯವನ್ನು ನೀಡಲು ಕ್ರಮ ವಹಿಸಬೇಕೆಂದು ಸಹಾಯಕ ನಿರ್ದೇಶಕರಿಗೆ ತಿಳಿಸಿದರು.

**9.ಕೈಗಾರಿಕೆ ಇಲಾಖೆ: ಸಂಖ್ಯೆ: ಜಿಪಂಹಾ/ಅಭಿ(3)ಕೈಗಾರಿಕೆ:2012-13 ದಿ: 26-06-2012ನ್ನು ಸಭೆಯಲ್ಲಿ ಮಂಡಿಸಲಾಯಿತು.**

ಉಪ ನಿರ್ದೇಶಕರು(ಪ್ರಭಾರ), ಕೈಗಾರಿಕೆ ಇಲಾಖೆ, ಹಾಸನ ಇವರು ಮಾತನಾಡುತ್ತಾ, 2012-13ನೇ ಸಾಲಿಗೆ ಲಿಂಕ್ ಡಾಕ್ಯುಮೆಂಟಿನಲ್ಲಿ ಇಲಾಖೆಯ ವಿವಿಧ ಯೋಜನೆಗಳಿಗೆ ನಿಗದಿಪಡಿಸಿರುವ ಅನುದಾನದ ವಿವರಗಳನ್ನು ಈ ಕೆಳಕಂಡಂತೆ ವಿವರಿಸಿದರು.

| ಕ್ರಸಂ | ಲೆಕ್ಕಶೀರ್ಷಿಕೆ ಮತ್ತು ಯೋಜನೆ / ಕಾರ್ಯಕ್ರಮದ ಹೆಸರು | ನಿಗದಿತ ಅನುದಾನ (ಲಕ್ಷ ರೂಗಳಲ್ಲಿ) |
|---|---|---|
| 1 | 2851-00-107-0-34<br>ವಿಚಾರಗೋಷ್ಠಿ ಮತ್ತು ವಸ್ತು ಪ್ರದರ್ಶನ | 5.00 |
| 2 | 2851-00-107-0-27<br>ಜಿಲ್ಲಾ ಔದ್ಯಮಿಕ ಕೇಂದ್ರಗಳು | 7.00 |
| 3 | 2851-00-107-0-32<br>ವೃತ್ತಿಪರ ಕುಶಲ ಕರ್ಮಿಗಳಿಗೆ ಸುಧಾರಿತ ಸಲಕರಣೆಗಳು | 2.00 |
| | ಒಟ್ಟು | 14.00 |

ಸಭೆಯಲ್ಲಿ ಕೈಗಾರಿಕೆ ಇಲಾಖೆಯ ಯೋಜನೆಗಳ ಬಗ್ಗೆ ಸಮಗ್ರವಾಗಿ ಚರ್ಚಿಸಲಾಯಿತು ಹಾಗೂ 2012-13ನೇ ಸಾಲಿಗೆ ಲಿಂಕ್ ಡಾಕ್ಯುಮೆಂಟಿನಲ್ಲಿ ನಿಗದಿಪಡಿಸಿರುವ ಅನುದಾನದ ಕ್ರಿಯಾ ಯೋಜನೆಗೆ ಸಭೆಯಲ್ಲಿ ಸರ್ವಾನುಮತದಿಂದ ಅನುಮೋದನೆ ನೀಡಿ ನಿರ್ಣಯಿಸಲಾಯಿತು.

ಉಪ ನಿದೇಶಕರು (ಪ್ರಭಾರ) ಇವರು ಮುಂದುವರೆದು ಮಾತನಾಡುತ್ತಾ, ಹೊಲಿಗೆಯನ್ನು ಕಲಿತಿರುವ ಅರ್ಹ ಫಲಾನುಭವಿಗಳಿಗೆ ಪ್ರಸಕ್ತ ಸಾಲಿಗೆ ಹೊಲಿಗೆ ಮಿಷನ್ ಜೊತೆಗೆ ಮೋಟಾರ್ ಅನ್ನು ಸಹ ನೀಡಲು ಉದ್ದೇಶಿಸಲಾಗಿದ್ದು, ಐಎಸ್ಐ ಮಾರ್ಕಿನ ಹೊಲಿಗೆ ಯಂತ್ರವನ್ನು ರೂ.6000/-ಗಳಲ್ಲಿ ನೀಡಲು ಉದ್ದೇಶಿಸಿದ್ದು, ರೂ. 4000/-ಗಳನ್ನು ಇಲಾಖೆಯಿಂದ ನೀಡಲಾಗುವುದು ಉಳಿದ ರೂ.2000/-ಗಳನ್ನು ಫಲಾನುಭವಿಗಳು ಭರಿಸಬೇಕಾಗಿರುತ್ತದೆ ಎಂದು ಸಭೆಗೆ ವಿವರ ನೀಡಿದರು.

**10.ಸಹಕಾರ ಇಲಾಖೆ: ಸಂಖ್ಯೆ: ಜಿಪಂಹಾ/ಅಭಿ(3)ಸಹಕಾರ/2012-13 ದಿ: 26-06-2012ನ್ನು ಸಭೆಯಲ್ಲಿ ಮಂಡಿಸಲಾಯಿತು.**

ಉಪ ನಿಬಂಧಕರು, ಸಹಕಾರ ಇಲಾಖೆ, ಹಾಸನ ಇವರು ಮಾತನಾಡುತ್ತಾ, 2012-13ನೇ ಸಾಲಿಗೆ ಲಿಂಕ್ ಡಾಕ್ಯುಮೆಂಟಿನಲ್ಲಿ ಇಲಾಖೆಯ ವಿವಿಧ ಯೋಜನೆಗಳಿಗೆ ನಿಗದಿಪಡಿಸಿರುವ ಅನುದಾನದ ವಿವರಗಳನ್ನು ಈ ಕೆಳಕಂಡಂತೆ ವಿವರಿಸಿದರು.

ಸಭೆಯಲ್ಲಿ ಸಹಕಾರ ಇಲಾಖೆಯ ಯೋಜನೆಗಳ ಬಗ್ಗೆ ಸಮಗ್ರವಾಗಿ ಚರ್ಚಿಸಲಾಯಿತು ಹಾಗೂ 2012-13ನೇ ಸಾಲಿಗೆ ಲಿಂಕ್ ಡಾಕ್ಯುಮೆಂಟಿನಲ್ಲಿ ನಿಗದಿಪಡಿಸಿರುವ ಅನುದಾನದ ಕ್ರಿಯಾ ಯೋಜನೆಗೆ ಸಭೆಯಲ್ಲಿ ಸರ್ವಾನುಮತದಿಂದ ಅನುಮೋದನೆ ನೀಡಿ ನಿರ್ಣಯಿಸಲಾಯಿತು.

ಮಾನ್ಯ ಸದಸ್ಯರಾದ ಶ್ರೀ ವಿ.ಎ.ನಂಜುಂಡಸ್ವಾಮಿರವರು ಮಾತನಾಡುತ್ತಾ, ರಾಷ್ಟ್ರೀಯ ವಿಕಾಸ ಯೋಜನೆಯಡಿ ಏನು ಪ್ರಸ್ತಾವನೆ ಸಲ್ಲಿಸಲಾಗಿದೆ ಎಂಬ ಬಗ್ಗೆ ವಿವರಗಳನ್ನು ನೀಡುವಂತೆ ಕೋರಿದರು. ಗೊರೂರಿನಲ್ಲಿ ನೀರಿನ ಸೌಲಭ್ಯ ಮತ್ತು ಸಿಮೆಂಟ್ ತೊಟ್ಟಿಗಳು, ಮಣ್ಣಿನ ಕೊಳಗಳು ಇದ್ದು, ಸಮರ್ಪಕವಾಗಿ ನಿರ್ವಹಣೆ ಮಾಡಿದಲ್ಲಿ ಮೀನುಮರಿಗಳನ್ನು ಸಾಕಿ ಬೇರೆ ಜಿಲ್ಲೆಗಳಿಗೂ ಸಹ ಸರಬರಾಜು ಮಾಡಬಹುದಾಗಿದ್ದು, ಈ ಬಗ್ಗೆ ಕ್ರಮ ವಹಿಸಬೇಕೆಂದು ಕೋರಿದರು.

ಉಪ ಕಾರ್ಯದರ್ಶಿ (ಅಭಿವೃದ್ಧಿ)ರವರು ಮಾತನಾಡುತ್ತಾ, ಹೇಮಾವತಿ ಜಲಾಶಯ ಯೋಜನೆಯ ಕಾರ್ಯಪಾಲಕ ಅಭಿಯಂತರರಿಗೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಂದ ಪತ್ರದ ಮೂಲಕ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸುವ ಬಗ್ಗೆ ತ್ವರಿತವಾಗಿ ಅಗತ್ಯ ಕ್ರಮ ವಹಿಸುವಂತೆ ಹಿರಿಯ ಸಹಾಯಕ ಮೀನುಗಾರಿಕಾ ನಿರ್ದೇಶಕರಿಗೆ ತಿಳಿಸಿದರು.

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಹಿರಿಯ ಸಹಾಯಕ ಮೀನುಗಾರಿಕಾ ನಿರ್ದೇಶಕರ ಕಛೇರಿಗೆ ಹೋಗುವ ಜಾಗದಲ್ಲಿ ಅಂಗಡಿಗಳನ್ನು ಇಟ್ಟುಕೊಂಡಿರುವುದನ್ನು ಗಮನಿಸಲಾಗಿದೆ. ಇದರಿಂದ, ಕಛೇರಿಗೆ ವಾಹನಗಳು ಹೋಗಲು ಬಹಳ ತೊಂದರೆಯಾಗಿದೆ. ಆದ್ದರಿಂದ, ಅಂಗಡಿಗಳನ್ನು ತೆರವುಗೊಳಿಸಿ ಸಮರ್ಪಕ ರಸ್ತೆಯ ವ್ಯವಸ್ಥೆಯನ್ನು ಮಾಡಿಕೊಡುವ ಬಗ್ಗೆ ಹಾಸನ ನಗರಸಭೆಯ ಆಯುಕ್ತರೊಂದಿಗೆ ಪತ್ರ ವ್ಯವಹಾರ ನಡೆಸಿ ಕ್ರಮ ಕೈಗೊಳ್ಳಬೇಕೆಂದು ಹಿರಿಯ ಸಹಾಯಕ ಮೀನುಗಾರಿಕಾ ನಿರ್ದೇಶಕರಿಗೆ ತಿಳಿಸಿದರು.

ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಹಾಸನ ಇವರು ಮಾತನಾಡುತ್ತಾ, **ರಾಮನಾಥಪುರದಲ್ಲಿರುವ ಕಿಯಾಸ್ಕವನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ಶ್ರೀ ಹರೀಶ್ ಬಿನ್ ಸುಬ್ಬೇಗೌಡ,** ರಾಮನಾಥಪುರ ಇವರು ತೆಗೆದುಕೊಳ್ಳಲು ಮುಂದೆ ಬಂದಿದ್ದು, ಮಾಸಿಕ ರೂ.300.00ಗಳಂತೆ ಬಾಡಿಗೆಯನ್ನು ನಿಗದಿಪಡಿಸಿ ಕಿಯಾಸ್ಕವನ್ನು ನೀಡಬಹುದೆಂದು ಅಭಿಪ್ರಾಯಿಸುತ್ತಾ, ವಿಷಯವನ್ನು ಸಭೆಗೆ ಮಂಡಿಸಿದರು.

**8.ಕೈಮಗ್ಗ ಮತ್ತು ಜವಳಿ ಇಲಾಖೆ: ಸಂ: ಜಿಪಂಹಾ/ಅಭಿ(3)ಕೈ & ಜ/2012-13 ದಿ: 26-06-2012ನ್ನು ಸಭೆಯಲ್ಲಿ ಮಂಡಿಸಲಾಯಿತು.**

ಉಪ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಹಾಸನ ಇವರು ಮಾತನಾಡುತ್ತಾ, 2012-13ನೇ ಸಾಲಿಗೆ ಲಿಂಕ್ ಡಾಕ್ಯುಮೆಂಟನಲ್ಲಿ ಇಲಾಖೆಯ ವಿವಿಧ ಯೋಜನೆಗಳಿಗೆ ನಿಗದಿಪಡಿಸಿರುವ ಅನುದಾನದ ವಿವರಗಳನ್ನು ಈ ಕೆಳಕಂಡಂತೆ ವಿವರಿಸಿದರು.

| ಕ್ರಸಂ | ಲೆಕ್ಕಶೀರ್ಷಿಕೆ ಮತ್ತು ಯೋಜನೆ / ಕಾರ್ಯಕ್ರಮದ ಹೆಸರು | ನಿಗದಿತ ಅನುದಾನ (ಲಕ್ಷ ರೂಗಳಲ್ಲಿ) |
|---|---|---|
| 1 | 2851-00-107-0-31<br>ಕೈಮಗ್ಗ ಉದ್ದಿಮೆಗಳಿಗೆ ಸಹಾಯಧನ<br>ಅ) ಕೈಮಗ್ಗ ನೇಯ್ಗೆ ತರಬೇತಿ ರೂ.3.15 ಲಕ್ಷಗಳು<br>ಆ) ಕೈಮಗ್ಗಗಳ ಆಧುನೀಕರಣ ರೂ.3.85ಲಕ್ಷಗಳು | 7.00 |

ಸಭೆಯಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆಯ ಯೋಜನೆಗಳ ಬಗ್ಗೆ ಸಮಗ್ರವಾಗಿ ಚರ್ಚಿಸಲಾಯಿತು ಹಾಗೂ 2011-12ನೇ ಸಾಲಿಗೆ ಲಿಂಕ್ ಡಾಕ್ಯುಮೆಂಟನಲ್ಲಿ ನಿಗದಿಪಡಿಸಿರುವ ಅನುದಾನದ ಕ್ರಿಯಾ ಯೋಜನೆಗೆ ಸಭೆಯಲ್ಲಿ ಸರ್ವಾನುಮತದಿಂದ ಅನುಮೋದನೆ ನೀಡಿ ನಿರ್ಣಯಿಸಲಾಯಿತು.

| | | |
|---|---|---|
| | | |
| 1 | ಯೋಜನೇತರ ಕಾರ್ಯಕ್ರಮಗಳು (ಜಿಲ್ಲಾ ವ್ಯಾಪ್ತಿ) (ಸಾಮಾನ್ಯ ಹಾಸಿಗೆ ಸೋಂಕು ನಿವಾರಕಗಳು ಹುಳು ಸಾಕಾಣಿಕೆ ಮಾಡುವ ಪರಿಕರಗಳು) | 25.00 |

ಉಪ ನಿರ್ದೇಶಕರು, ರೇಷ್ಮೆ ಇಲಾಖೆರವರು ಮಾತನಾಡುತ್ತಾ, 2012-13ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 2851-00-107-0-30 (ಯೋಜನೆ) ರೇಷ್ಮೆ ಬೆಳೆಗಾರರಿಗೆ ಸಹಾಯ (ರೇಷ್ಮೆ ಗೂಡಿಗೆ ಪ್ರೋತ್ಸಾಹಧನ) ಕಾರ್ಯಕ್ರಮದಡಿ ರೂ.20.00ಲಕ್ಷಗಳು ನಿಗದಿಯಾಗಿದ್ದು, ಸದರಿ ಅನುದಾನವನ್ನು ದ್ವಿತಳಿ ರೇಷ್ಮೆ ಗೂಡಿಗೆ ರೂ.400.00ಕ್ಕಿಂತ ಕಡಿಮೆ ಬೆಲೆಗೆ ಮಾರಾಟವಾಗುವ ದ್ವಿತಳಿ ಗೂಡಿಗೆ ಕೆ.ಜಿ.ಗೆ ಗರಿಷ್ಟ ರೂ.40.00ಗಳ ಪ್ರೋತ್ಸಾಹಧನವನ್ನು ರೇಷ್ಮೆ ಬೆಳೆಗಾರರಿಗೆ ನೀಡಲು ವಿನಿಯೋಗಿಸಲಾಗುತ್ತಿದೆ. ಆದ್ದರಿಂದ, ಯೋಜನೇತರದಡಿಯಲ್ಲಿ ವೇತನೇತರ ಬಾಬ್ತಿನಲ್ಲಿ ಲಭ್ಯವಿರುವ ಅನುದಾನದಲ್ಲಿ ರೂ.25.00ಲಕ್ಷಗಳನ್ನು ವಿನಿಯೋಗಿಸಿ ಸಾಮಾನ್ಯ/ಹಾಸಿಗೆ ಸೋಂಕುನಿವಾರಕಗಳನ್ನು ಖರೀದಿಸಲು ಸಭೆಯು ಅನುಮೋದನೆ ನೀಡಬೇಕೆಂದು ಕೋರಿದರು.

ಖರೀದಿಸಲು ಅನುಮೋದನೆಯನ್ನು ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

**7.ಮೀನುಗಾರಿಕೆ ಇಲಾಖೆ: ಸಂ: ಜಿಪಂಹಾ/ಅಭಿ(3)ಮೀನುಗಾರಿಕೆ/2012-13 ದಿ: 26-06-2012ನ್ನು ಸಭೆಯಲ್ಲಿ ಮಂಡಿಸಲಾಯಿತು.**

ಮೀನುಗಾರಿಕಾ ಹಿರಿಯ ಸಹಾಯಕ ನಿರ್ದೇಶಕರು, ಮೀನುಗಾರಿಕೆ ಇಲಾಖೆ, ಹಾಸನ ಇವರು ಮಾತನಾಡುತ್ತಾ, 2012-13ನೇ ಸಾಲಿಗೆ ಲಿಂಕ್ ಡಾಕ್ಯುಮೆಂಟನಲ್ಲಿ ಇಲಾಖೆಯ ವಿವಿಧ ಯೋಜನೆಗಳಿಗೆ ನಿಗದಿಪಡಿಸಿರುವ ಅನುದಾನದ ವಿವರಗಳನ್ನು ಈ ಕೆಳಕಂಡಂತೆ ವಿವರಿಸಿದರು.

| ಕ್ರಸಂ | ಲೆಕ್ಕಶೀರ್ಷಿಕೆ ಮತ್ತು ಯೋಜನೆ / ಕಾರ್ಯಕ್ರಮದ ಹೆಸರು | ನಿಗದಿತ ಅನುದಾನ (ಲಕ್ಷ ರೂಗಳಲ್ಲಿ) |
|---|---|---|
| 1 | 2405-00-101-0-28-ಒಳನಾಡು ಮೀನುಗಾರಿಕೆ ಅಭಿವೃದ್ದಿಗಾಗಿ ಸಹಾಯ | 10.00 |
| 2 | 2405-00-101-0-27-ಮೀನುಗಾರಿಕೆ ಕಟ್ಟಡಗಳು ಸೌಲಭ್ಯಗಳ ನಿರ್ಮಾಣ | 10.00<br>2.00 |
| 3 | 2405-00-101-0-30-ಮೀನು ಮಾರುಕಟ್ಟೆ ಮತ್ತು ಮತ್ಸ್ಯವಾಹಿನಿಗೆ ಸಹಾಯ | 5.0 |
| 4 | 2405-00-101-0-32-ಪ್ರದರ್ಶನ ಮತ್ತು ತರಬೇತಿ | 5.50 |
| | ಒಟ್ಟು | 29.50 |

ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಹಾಸನ ಇವರು ಮಂಡಿಸಿರುವ ವಿಷಯವನ್ನು ಸಭೆಯಲ್ಲಿ ವಿವರವಾಗಿ ಚರ್ಚಿಸಲಾಗಿ, ರಾಮನಾಥಪುರದಲ್ಲಿರುವ ಕಿಯಾಸ್ಕವನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ಮುಂದೆ ಬಂದಿರುವಂತಹ ಶ್ರೀ ಹರೀಶ್ ಬಿನ್ ಸುಬ್ಬೇಗೌಡ, ರಾಮನಾಥಪುರ, ಅರಕಲಗೂಡು ತಾಲ್ಲೂಕು ರವರಿಗೆ ಮಾಸಿಕ ರೂ.300/-(ರೂಪಾಯಿ ಮುನ್ನೂರು ಮಾತ್ರ)ಗಳಂತೆ ನಿಗದಿಪಡಿಸಿ ಇತರೆ ಷರತ್ತು ಮತ್ತು ನಿಬಂಧನೆಗಳೊಂದಿಗೆ ನೀಡುವಂತೆ ಅನುಮತಿ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ಸಭೆಯಲ್ಲಿ ಮೀನುಗಾರಿಕೆ ಇಲಾಖೆಯ ಯೋಜನೆಗಳ ಬಗ್ಗೆ ಸಮಗ್ರವಾಗಿ ಚರ್ಚಿಸಲಾಯಿತು ಹಾಗೂ 2012-13ನೇ ಸಾಲಿಗೆ ಲಿಂಕ್ ಡಾಕ್ಯುಮೆಂಟನಲ್ಲಿ ನಿಗದಿಪಡಿಸಿರುವ ಅನುದಾನದ ಕ್ರಿಯಾ ಯೋಜನೆಗೆ ಸಭೆಯಲ್ಲಿ ಸರ್ವಾನುಮತದಿಂದ ಅನುಮೋದನೆ ನೀಡಿ ನಿರ್ಣಯಿಸಲಾಯಿತು.

| | | |
|---|---|---|
| 3 | 2435-00-101-0-38-,ಪ್ರಚಾರ ಮತ್ತು ಸಾಹಿತ್ಯ | 5.00 |
| 4 | 2435-00-101-0-35-ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ | 5.00 |
| 5 | 2435-00-101-0-32-ಕಟ್ಟಡಗಳು | 15.00 |
| 6 | 2435-00-101-0-39- ಶೈತ್ಯಾಗಾರಿಕೆಗೆ ಸಹಾಯಧನ | 6.00 |
| 7 | 2435-00-101-0-02-ಸಾಮರ್ಥ್ಯವುಳ್ಳ ರಾಜ್ಯಗಳಲ್ಲಿ ಎಣ್ಣೆ ತಾಳೆಯ ವ್ಯವಸಾಯ | 3.00 |
| 8 | ಜೇನು ಕೃಷಿ ಅಭಿವೃದ್ಧಿ ಕಾರ್ಯಕ್ರಮ | 3.00 |
| | ಒಟ್ಟು | 53.00 |

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ತೋಟಗಾರಿಕೆ ಇಲಾಖೆಗೆ ಸೇರಿದ ಜಾಗಗಳನ್ನು ಇಲಾಖೆಯ ವಶಕ್ಕೆ ಪಡೆಯಲು ಅಗತ್ಯ ಕ್ರಮ ವಹಿಸುವಂತೆ ಸಭೆಯಲ್ಲಿ ಹಾಜರಿದ್ದ ಸಹಾಯಕ ನಿರ್ದೇಶಕರಿಗೆ ತಿಳಿಸಿದರು.

ಮುಂದುವರೆದು, ಹಾಸನ ತಾಲ್ಲೂಕು ಬಸವಾಪಟ್ಟ, ಹೊನ್ನಾವರ ಮತ್ತು ಅರಸೀಕೆರೆ ತಾ: ನೀರಗುಂದ ಗ್ರಾಮಗಳಲ್ಲಿ ತೆಂಗಿನ ಮರಗಳಿಗೆ ಗರಿರೋಗ ಬಂದಿದ್ದು, ಇದರ ನಿಯಂತ್ರಣಕ್ಕೆ ಅಗತ್ಯ ಕ್ರಮ ವಹಿಸಬೇಕೆಂದು ತಿಳಿಸಿದರು.

**<u>ರೇಷ್ಮೆ ಇಲಾಖೆ: ಸಂಖ್ಯೆ:ಜಿಪಂಯೋ/ಅವಿ(3)ರೇಷ್ಮೆ/2012-13 ದಿನಾಂಕ: 26-06-2012ನ್ನು ಸಭೆಯಲ್ಲಿ ಮಂಡಿಸಲಾಯಿತು.</u>**

ಉಪ ನಿರ್ದೇಶಕರು, ರೇಷ್ಮೆ ಇಲಾಖೆ, ಹಾಸನ ಇವರು ಮಾತನಾಡುತ್ತಾ, 2012-13ನೇ ಸಾಲಿಗೆ ರೇಷ್ಮೆ ಇಲಾಖೆಗೆ ಲಿಂಕ್ ಪುಸ್ತಕದ ಪ್ರಕಾರ ಈ ಕೆಳಗಿನಂತೆ ಅನುದಾನ ನಿಗದಿಪಡಿಸಲಾಗಿದೆ ಎಂದು ಸಭೆಯಲ್ಲಿ ವಿವರಿಸಿದರು.

| ಕ್ರಸಂ | ಲೆಕ್ಕಶೀರ್ಷಿಕೆ ಮತ್ತು ಯೋಜನೆ / ಕಾರ್ಯಕ್ರಮದ ಹೆಸರು | ನಿಗದಿತ ಅನುದಾನ (ಲಕ್ಷ ರೂಗಳಲ್ಲಿ) |
|---|---|---|
| 1 | 2851-00-104-0-30-ರೇಷ್ಮೆ ಬೆಳೆಗಾರರಿಗೆ ಸಹಾಯ | 20.00 |
| 2 | 2851-00-104-0-35 ಸಲಹಾ ಸೇವೆಗಳು, ಪ್ರದರ್ಶನ ಪ್ರಚಾರ, ಕ್ಷೇತ್ರೋತ್ಸವ, ದೃಶ್ಯ ಮತ್ತು ಶ್ರವ್ಯ ಹಾಗೂ ಮಹಿಳಾ ಪ್ರಾತ್ಯಕ್ಷತಾ ಕ್ಷೇತ್ರಗಳು | 3.00 |
| 3 | 2851-00-104-0-36-ತರಬೇತಿ | 4.00 |
| 4 | 2851-00-104-0-38-ಕ್ಷೇತ್ರಗಳು | 2.00 |
| | ಒಟ್ಟು | 29.00 |

ಸಭೆಯಲ್ಲಿ ರೇಷ್ಮೆ ಇಲಾಖೆಯ ಯೋಜನೆಗಳ ಬಗ್ಗೆ ಸಮಗ್ರವಾಗಿ ಚರ್ಚಿಸಲಾಯಿತು ಹಾಗೂ 2012-13ನೇ ಸಾಲಿಗೆ ಲಿಂಕ್ ಡಾಕ್ಯುಮೆಂಟನಲ್ಲಿ ನಿಗದಿಪಡಿಸಿರುವ ಅನುದಾನದ ಕ್ರಿಯಾ ಯೋಜನೆಗೆ ಸಭೆಯಲ್ಲಿ ಸರ್ವಾನುಮತದಿಂದ ಅನುಮೋದನೆ ನೀಡಿ ನಿರ್ಣಯಿಸಲಾಯಿತು.

ಹಾಗೂ ಉಪ ನಿರ್ದೇಶಕರು, ರೇಷ್ಮೆ ಇಲಾಖೆ ಹಾಸನ ಇವರು ಕೋರಿರುವಂತೆ ಹಾಸನ ಜಿಲ್ಲೆ ದ್ವಿತಳಿ ಬಿತ್ತನೆ ಪ್ರದೇಶವಾಗಿದ್ದು, ಬೈವೋಲ್ಟನ್ ಬೆಳೆಗಳ ಸಂರಕ್ಷಣೆ ಅತ್ಯವಶ್ಯಕವಾಗಿದೆ. ಆದಕಾರಣ, ಯೋಜನೇತರ ಲೆಕ್ಕಶೀರ್ಷಿಕೆಯಡಿ ವೇತನೇತರ ಬಾಬ್ತಿನಲ್ಲಿ ಲಭ್ಯವಾಗುವ ಅನುದಾನ ರೂ.25.00 (ರೂಪಾಯಿ ಇಪ್ಪತ್ತೈದು ಲಕ್ಷ ಮಾತ್ರ)ಗಳಲ್ಲಿ ಸಾಮಾನ್ಯ/ಹಾಸಿಗೆ ಸೋಂಕು ನಿವಾರಕಗಳನ್ನು ಹಾಗೂ ರೇಷ್ಮೆ ಹುಳು ಸಾಕಾಣಿಕೆ ಮಾಡುವ ಪರಿಕರಗಳನ್ನು

| | | | |
|---|---|---|---|
| | | **4.ಪಶುಪಾಲನೆ ಇಲಾಖೆ:**<br>ಸಹಾಯಕ ನಿರ್ದೇಶಕರು, ಪಶುಪಾಲನಾ ಇಲಾಖೆ, ಹಾಸನ ಇವರು ಇಲಾಖೆಯ ಯೋಜನೆಗಳ ಬಗ್ಗೆ ವಿವರಗಳನ್ನು ಸಭೆಗೆ ಈ ಕೆಳಕಂಡಂತೆ ನೀಡಿದರು | ಪಶುಪಾಲನಾ ಇಲಾಖೆಯ ವಿವಿಧ ಕಾರ್ಯಕ್ರಮಗಳ ಬಗ್ಗೆ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಲಾಯಿತು. ಹಾಗೂ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. ಅಲ್ಲದೆ, ಕಟ್ಟಡ ಕಾಮಗಾರಿಗಳು ಹಾಗೂ ರಿಪೇರಿ ಕಾಮಗಾರಿಗಳ ಅನುದಾನವನ್ನು ಸಮಿತಿಯ ಎಲ್ಲಾ ಸದಸ್ಯರ ಅಭಿಪ್ರಾಯ ಪಡೆದು ಅನುಷ್ಠಾನಗೊಳಿಸುವ ಷರತ್ತನ್ನು ಇಲಾಖಾಧಿಕಾರಿಗಳಿಗೆ ನೀಡಿ ಉಳಿದಂತೆ, ನಿಯಮಾನುಸಾರ ಅನುಷ್ಠಾನಗೊಳಿಸಲು ಸೂಚಿಸಿ ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. |

| ಕ್ರಸಂ | ಲೆಕ್ಕಶೀರ್ಷಿಕೆ ಮತ್ತು ಯೋಜನೆ / ಕಾರ್ಯಕ್ರಮದ ಹೆಸರು | ನಿಗದಿತ ಅನುದಾನ (ಲಕ್ಷ ರೂಗಳಲ್ಲಿ) |
|---|---|---|
| 1 | 2403-00-101-0-28,ಕಟ್ಟಡಗಳು | 20.00 |
| 2 | 2403-00-101-0-29,ಜಾನುವಾರು ಆಸ್ಪತ್ರೆಯಲ್ಲಿ ಪಾಲಿಕ್ಲಿನಿಕ್ ಸ್ಥಾಪನೆ | 4.00 |
| 3 | 2403-00-101-0-27,-ಔಷಧಗಳು, ರಾಸಾಯನಿಕ ಪದಾರ್ಥಗಳು ಮತ್ತು ಸಾಮಗ್ರಿಗಳ ಸರಬರಾಜು | 50.00 |
| 4 | 2403-00-101-0-31-ಗಿರಿರಾಜ ಹಾಗೂ ಇತರೆ ಹಕ್ಕಿಗಳ ಸಾಕಾಣೆ | 4.00 |
| 5 | 2403-00-101-0-30-ವಿಸ್ತರಣಾ ಘಟಕಗಳ ಬಲಪಡಿಸುವಿಕೆ | 5.00 |
| | ಒಟ್ಟು | 83.00 |

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, 2011-12ನೇ ಸಾಲಿಗೆ ಕಟ್ಟಡಗಳು ಯೋಜನೆಯಡಿಯಲ್ಲಿ ಯಾವ ಯಾವ ಕಟ್ಟಡಗಳಿಗೆ ನಿಗದಿಪಡಿಸಲಾಗಿದೆ. ಎಷ್ಟು ಹಣ ಖರ್ಚಾಗಿದೆ ಎಂಬ ಬಗ್ಗೆ ವಿವರಗಳನ್ನು ನೀಡುವಂತೆ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ ಇವರಿಗೆ ತಿಳಿಸಿದರು.

**5.ತೋಟಗಾರಿಕೆ ಇಲಾಖೆ: ಸಂಖ್ಯೆ: ಜಿಪಂಹಾ/ಅಭಿ(3)ತೋಟಗಾರಿಕೆ/2012-13 ದಿ: 26-06-2012ನ್ನು ಸಭೆಯಲ್ಲಿ ಮಂಡಿಸಲಾಯಿತು.**

ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಹಾಸನ ಇವರು ತಮ್ಮ ಇಲಾಖೆಗೆ 2012-13ನೇ ಸಾಲಿಗೆ ಲಿಂಕ್ ಡಾಕ್ಯುಮೆಂಟಿನಲ್ಲಿ ನಿಗದಿಪಡಿಸಿರುವ ಅನುದಾನದ ವಿವರಗಳನ್ನು ಕಾರ್ಯಕ್ರಮವಾರು ಕೆಳಗಿನಂತೆ ವಿವರಿಸಿದರು.

| ಕ್ರಸಂ | ಲೆಕ್ಕಶೀರ್ಷಿಕೆ ಮತ್ತು ಯೋಜನೆ / ಕಾರ್ಯಕ್ರಮದ ಹೆಸರು | ನಿಗದಿತ ಅನುದಾನ (ಲಕ್ಷ ರೂಗಳಲ್ಲಿ) |
|---|---|---|
| 1 | 2435-00-101-0-28,-ತೋಟಗಾರಿಕೆ ಬೆಳೆಗಳಿಗೆ ವಿಶೇಷ ಹನಿ ನೀರಾವರಿ ಸಹಾಯಧನ | 10.00 |
| 2 | 2435-00-101-0-36,-ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆ ಯೋಜನೆ | 6.00 |

ತೋಟಗಾರಿಕೆ ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಲಾಯಿತು. ಹಾಗೂ 2012-13ನೇ ಸಾಲಿನ ಲಿಂಕ್ ಪುಸ್ತಕದ ಗುರಿಗಳಿಗೆ ಅನುಮೋದನೆ ನೀಡಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. ಹಾಗೂ ಇಲಾಖಾಧಿಕಾರಿಗಳು ನಿಯಮಾನುಸಾರ ಕ್ರಿಯಾ ಯೋಜನೆ ತಯಾರಿಸಿ ಅನುಷ್ಠಾನಗೊಳಿಸಲು ಸೂಚಿಸಲಾಯಿತು.

**2. ಜಲಾನಯನ ಅಭಿವೃದ್ಧಿ ಇಲಾಖೆ: ಸಂಖ್ಯೆ: ಜಿಪಂಹಾ/ಅಭಿ(3)ಜಲಾನಯನ/2012-13 ದಿ: 22-06-2012ನ್ನು ಸಭೆಯಲ್ಲಿ ಮಂಡಿಸಲಾಯಿತು.**

ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಯವರು ಇಲಾಖೆಯಿಂದ ಅನುಷ್ಟಾನ ಮಾಡುವ ಯೋಜನೆಗಳ ಬಗ್ಗೆ ಸಭೆಗೆ ಈ ಕೆಳಕಂಡಂತೆ ವಿವರ ನೀಡಿದರು.

| ಕ್ರಸಂ | ಲೆಕ್ಕಶೀರ್ಷಿಕೆ ಮತ್ತು ಯೋಜನೆ / ಕಾರ್ಯಕ್ರಮದ ಹೆಸರು | ರಾಜ್ಯ (ಲಕ್ಷ ರೂಗಳಲ್ಲಿ) | ಕೇಂದ್ರ (ಲಕ್ಷ ರೂಗಳಲ್ಲಿ) | ಒಟ್ಟು (ಲಕ್ಷ ರೂಗಳಲ್ಲಿ) |
|---|---|---|---|---|
| 1 | 2501-02-800-0-02 ಬರಪೀಡಿತ ಪ್ರದೇಶಾಭಿವೃದ್ಧಿ ಯೋಜನೆ | 10.50 | 31.50 | 42.00 |
| 2 | 2501-02-800-0-03 ಸಮಗ್ರ ಬಂಜರು ಭೂಮಿ ಅಭಿವೃದ್ಧಿ ಯೋಜನೆ | 2.85 | 31.37 | 34.22 |
| 3 | 2402-00-102-0-26 ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆ | 13.75 | 123.75 | 137.50 |
| | ಒಟ್ಟು | 27.10 | 186.62 | 213.72 |

ಸಭೆಯಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆಯ ಯೋಜನೆಗಳ ಬಗ್ಗೆ ಸಮಗ್ರವಾಗಿ ಚರ್ಚಿಸಲಾಯಿತು ಹಾಗೂ 2012-13ನೇ ಸಾಲಿಗೆ ಲಿಂಕ್ ಡಾಕ್ಯುಮೆಂಟನಲ್ಲಿ ನಿಗದಿಪಡಿಸಿರುವ ಅನುದಾನದ ಕ್ರಿಯಾ ಯೋಜನೆಗೆ ಸಭೆಯಲ್ಲಿ ಸರ್ವಾನುಮತದಿಂದ ಅನುಮೋದನೆ ನೀಡಿ ನಿರ್ಣಯಿಸಲಾಯಿತು.

**3.ಸಾಮಾಜಿಕ ಅರಣ್ಯ ವಿಭಾಗ: ಸಂ: ಜಿಪಂಹಾ/ಅಭಿ(3)/ಸಾ.ಅರಣ್ಯ/2012-13 ದಿ: 26-06-2012ನ್ನು ಸಭೆಯಲ್ಲಿ ಮಂಡಿಸಲಾಯಿತು.**

ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ಇಲಾಖೆ, ಹಾಸನ ಇವರು ಮಾತನಡುತ್ತಾ, 2012-13ನೇ ಸಾಲಿಗೆ ಸಾಮಾಜಿಕ ಅರಣ್ಯ ವಿಭಾಗಕ್ಕೆ ಲಿಂಕ್ ಮಸ್ತಕದಲ್ಲಿ ನಿಗದಿಪಡಿಸಿರುವ ಅನುದಾನದ ವಿವರಗಳನ್ನು ಈ ಕೆಳಕಂಡಂತೆ ಸಭೆಗೆ ವಿವರಿಸಿದರು.

| ಕ್ರಸಂ | ಲೆಕ್ಕಶೀರ್ಷಿಕೆ ಮತ್ತು ಯೋಜನೆ / ಕಾರ್ಯಕ್ರಮದ ಹೆಸರು | ನಿಗದಿತ ಅನುದಾನ (ಲಕ್ಷ ರೂಗಳಲ್ಲಿ) |
|---|---|---|
| 1 | 2406-00-101-0-27 ವಿಶೇಷ ಅಭಿವೃದ್ಧಿ ಯೋಜನೆ | 40.00 |
| 2 | 2406-00-101-0-28-ಕಟ್ಟಡಗಳು | 10.00 |
| | ಒಟ್ಟು | 50.00 |

ಸಭೆಯಲ್ಲಿ ಸಾಮಾಜಿಕ ಅರಣ್ಯ ಇಲಾಖೆಯ ಯೋಜನೆಗಳ ಬಗ್ಗೆ ಸಮಗ್ರವಾಗಿ ಚರ್ಚಿಸಲಾಯಿತು ಹಾಗೂ 201-13ನೇ ಸಾಲಿಗೆ ಲಿಂಕ್ ಡಾಕ್ಯುಮೆಂಟನಲ್ಲಿ ನಿಗದಿಪಡಿಸಿರುವ ಗುರಿಗಳ ಅನುದಾನ ಕ್ರಿಯಾ ಯೋಜನೆಗೆ ಸಭೆಯಲ್ಲಿ ಸರ್ವಾನುಮತದಿಂದ ಅನುಮೋದನೆ ನೀಡಿ ನಿರ್ಣಯಿಸಲಾಯಿತು.

ಮಾನ್ಯ ಸಮಿತಿ ಅಧ್ಯಕ್ಷರು ಮಾತನಾಡುತ್ತಾ, ರಸಗೊಬ್ಬರವನ್ನು ಖಾಸಗಿಯವರು ಚೀಲದ ಮೇಲೆ ನಮೂದಿಸಿರುವ ದರಕ್ಕಿಂತ ಹೆಚ್ಚಿನ ದರದಲ್ಲಿ ಮಾರಾಟ ಮಾಡುತ್ತಿರುವುದು ಕಂಡುಬಂದಿದೆ. ಆದ್ದರಿಂದ, ಸಹಕಾರ ಸಂಘಗಳ ಮುಖಾಂತರ ರಸಗೊಬ್ಬರವನ್ನು ಎತ್ತುವಳಿ ಮಾಡಿಸಿ ರೈತರಿಗೆ ನಿಗದಿತ ದರದಲ್ಲಿ ನೀಡಲು ಕ್ರಮ ವಹಿಸಬೇಕೆಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ವಿ.ಎ.ಸಂಜುಂಡಸ್ವಾಮಿರವರು ಮಾತನಾಡುತ್ತಾ, ಸಹಕಾರ ಸಂಘಗಳಿಂದ ರಸಗೊಬ್ಬರವನ್ನು ಎತ್ತುವಳಿ ಮಾಡುವಾಗ ಬೇರೆ ಅವಶ್ಯಕವಿಲ್ಲದ ಗೊಬ್ಬರಗಳನ್ನು ಸೇರಿಸಿ ನೀಡುತ್ತಿರುವುದು ಕಂಡುಬಂದಿದೆ. ಅಲ್ಲದೆ, ಸಾಗಾಣಿಕಾ ವೆಚ್ಚ/ ಗೊಬ್ಬರವನ್ನು ವಾಹನಕ್ಕೆ ಏರಿಸುವುದು/ಇಳಿಸುವ ದರವನ್ನೂ ಸಹಕಾರ ಸಂಘಗಳ ವತಿಯಿಂದಲೇ ಭರಿಸಲಾಗುತ್ತಿದೆ. ಇದರಿಂದ, ಚೀಲದ ಮೇಲೆ ನಮೂದಾಗಿರುವ ದರದಲ್ಲಿ ಮಾರಾಟ ಮಾಡಲು ಕಷ್ಟಸಾಧ್ಯವಾಗುತ್ತದೆ. ಆದ್ದರಿಂದ, ಸಹಕಾರ ಸಂಘಗಳು ಬೇಡಿಕೆಗನುಗುಣವಾಗಿ ರಸಗೊಬ್ಬರವನ್ನು ಸರಬರಾಜು ಮಾಡಲು ಮತ್ತು ಸಾಗಾಣಿಕಾ ವೆಚ್ಚವನ್ನು ಪಾವತಿಸಲು ಕ್ರಮ ವಹಿಸಬೇಕೆಂದು ಕೋರಿದರು.

ಸಭೆಯಲ್ಲಿ ಹಾಜರಿದ್ದ ಸಹಾಯಕ ನಿರ್ದೇಶಕರು ಉತ್ತರಿಸುತ್ತಾ, ಸಾಗಾಣಿಕಾ ವೆಚ್ಚದ ಬಗ್ಗೆ ಸರ್ಕಾರದಿಂದ ಹೊಸದಾಗಿ ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಸಹಕಾರ ಸಂಘಗಳಿಗೆ ಸಾಗಾಣಿಕಾ ವೆಚ್ಚವನ್ನು ಭರಿಸಲು ಕ್ರಮ ವಹಿಸಲಾಗುವುದು ಎಂದು ಸಭೆಗೆ ಮಾಹಿತಿ ನೀಡಿದರು.

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಕಾರೇಕೆರೆ ರೈತರ ಸಂಪರ್ಕ ಕೇಂದ್ರಕ್ಕೆ ಗೇಟ್ ಅಳವಡಿಸಲು ಅನುದಾನವನ್ನು ಬಿಡುಗಡೆ ಮಾಡಿದ್ದರೂ ಸಹ ಕಾಮಗಾರಿಯನ್ನು ಮಾಡಿಲ್ಲದೇ ಇರುವ ಬಗ್ಗೆ ಆಕ್ಷೇಪವನ್ನು ವ್ಯಕ್ತಪಡಿಸುತ್ತಾ, ವಿವರಣೆಯನ್ನು ನೀಡಬೇಕೆಂದು ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚನ್ನರಾಯಪಟ್ಟಣ ಇವರಿಗೆ ತಿಳಿಸಿದರು.

ಮುಂದುವರೆದು, ಜಿಲ್ಲೆಯಲ್ಲಿ ಎಷ್ಟು ರೈತ ಸಂಪರ್ಕ ಕೇಂದ್ರಗಳು ಇವೆ, ಅವುಗಳಲ್ಲಿ ಎಷ್ಟು ರೈತ ಸಂಪರ್ಕ ಕೇಂದ್ರಗಳಿಗೆ ಸ್ವಂತ ಕಟ್ಟಡಗಳಿವೆ, ಎಷ್ಟು ಕೇಂದ್ರಗಳಿಗೆ ಸ್ವಂತ ಕಟ್ಟಡಗಳಿಲ್ಲ ಮತ್ತು ಎಷ್ಟು ಕೇಂದ್ರಗಳಿಗೆ ನಿವೇಶನ ಲಭ್ಯವಿದೆ ಅಥವಾ ಲಭ್ಯವಿಲ್ಲ ಎಂಬ ಬಗ್ಗೆ ಪೂರ್ಣ ವಿವರಗಳನ್ನು ಸಲ್ಲಿಸುವಂತೆ ಜಂಟಿ ನಿರ್ದೇಶಕರಿಗೆ ತಿಳಿಸಿದರು.

ಜಂಟಿ ನಿರ್ದೇಶಕರು ಉತ್ತರಿಸುತ್ತಾ, ಜಿಲ್ಲೆಯಲ್ಲಿ 38 ರೈತ ಸಂಪರ್ಕ ಕೇಂದ್ರಗಳಿದ್ದು, ಅವುಗಳಲ್ಲಿ 22 ಕೇಂದ್ರಗಳಿಗೆ ಸ್ವಂತ ಕಟ್ಟಡವಿದ್ದು, 16 ಕೇಂದ್ರಗಳನ್ನು ಬಾಡಿಗೆ ಕಟ್ಟಡದಲ್ಲಿ ನಡೆಸಲಾಗುತ್ತಿದೆ. ಈ ಬಗ್ಗೆ ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಸಕಲೇಶಪುರ ತಾ: ಹಾನುಬಾಳುವಿನಲ್ಲಿ ನಿವೇಶನ ಲಭ್ಯವಿದೆ. ಆದರೆ, ಒಂದೇ ಮಟ್ಟದಲ್ಲಿರುವುದಿಲ್ಲ. ರಾಮನಾಥಪುರದಲ್ಲಿ ರೈತಸಂಪರ್ಕ ಕೇಂದ್ರಕ್ಕೆ ಹೊಸದಾಗಿ ಕಟ್ಟಡ ನಿರ್ಮಿಸಲಾಗಿದೆ. ಆದರೆ, ಸುತ್ತಮುತ್ತಲಿನ ಪರಿಸರ ಸ್ವಚ್ಛವಾಗಿರುವುದಿಲ್ಲ. ಆದ್ದರಿಂದ, ಅದಕ್ಕೆ ಕಾಂಪೌಂಡ್ ಅಗತ್ಯವಿದೆ. ಆದ್ದರಿಂದ, ಕಾಂಪೌಂಡ್ ನಿರ್ಮಾಣ ಮಾಡಿಕೊಡಬೇಕೆಂದು ಕೋರಿದರು.

ದಿನಾಂಕ: 27-06-2012ರಂದು ಬೆಳಿಗ್ಗೆ: 11-00 ಗಂಟೆಗೆ ಹೊಯ್ಸಳ ಸಭಾಂಗಣ, ಹಾಸನ ಜಿಲ್ಲಾ ಪಂಚಾಯಿತಿ, ಹಾಸನ ಇಲ್ಲಿ ನಡೆದ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ಸಭೆಯ ನಡವಳಿಗಳು

ಅಧ್ಯಕ್ಷತೆ: ಶ್ರೀ ಹುಚ್ಚೇಗೌಡ,
ಅಧ್ಯಕ್ಷರು,
ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ.

ಹಾಜರಿ : 05

ಗೈರು ಹಾಜರಿ:02

<table>
<tr><th>ಕ್ರಸಂ</th><th>ವಿಷಯ</th><th>ಚರ್ಚೆ</th><th>ತೀರ್ಮಾನ</th></tr>
<tr><td></td><td colspan="3">ಉಪ ಕಾರ್ಯದರ್ಶಿ(ಅಭಿವೃದ್ಧಿ)ರವರು ಸಭೆಗೆ ಹಾಜರಿದ್ದ ಮಾನ್ಯ ಅಧ್ಯಕ್ಷರು, ಸಮಿತಿ ಸದಸ್ಯರು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಬೇಕೆಂದು ಕೋರಿದರು.</td></tr>
<tr><td>1</td><td>ಕೃಷಿ ಮತ್ತು ಕೈಗಾರಿಕೆ ಸ್ಥಾಯಿ ಸಮಿತಿಯ ವ್ಯಾಪ್ತಿಗೊಳಪಡುವ ವಿವಿಧ ಇಲಾಖೆಗಳ ಕ್ರಿಯಾ ಯೋಜನೆಗಳಿಗೆ ಅನುಮೋದನೆ ನೀಡುವ ಬಗ್ಗೆ.</td><td>2012-13ನೇ ಸಾಲಿನ ವಿವಿಧ ಇಲಾಖೆಗಳ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ, ಇಲಾಖಾಧಿಕಾರಿಗಳು ಈ ಕೆಳಗಿನಂತೆ ತಮ್ಮ ಇಲಾಖಾ ವ್ಯಾಪ್ತಿಯ ಮಾಹಿತಿಯನ್ನು ನೀಡಿದರು.<br><br><u>1.ಕೃಷಿ ಇಲಾಖೆ:</u> ಟಿಪ್ಪಣಿ ಸಂಖ್ಯೆ: ಜಿಪಂಹಾ/ಯೋವಿ(3)ಕೃಷಿ/2012-13 ದಿನಾಂಕ: 26-06-2012ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಜಂಟಿ ಕೃಷಿ ನಿರ್ದೇಶಕರು ಮಾಹಿತಿ ನೀಡುತ್ತಾ, ಕೃಷಿ ಇಲಾಖೆಗೆ 2012-13ನೇ ಸಾಲಿಗೆ ಯೋಜನಾ ಕಾರ್ಯಕ್ರಮಗಳ ಅಡಿಯಲ್ಲಿ ಲಿಂಕ್ ಪುಸ್ತಕದ ಪ್ರಕಾರ ಈ ಕೆಳಗಿನಂತೆ ಅನುದಾನ ನಿಗದಿಪಡಿಸಲಾಗಿದೆ ಎಂದು ವಿವರಿಸಿದರು.<br>
<table>
<tr><th>ಕ್ರಸಂ</th><th>ಲೆಕ್ಕಶೀರ್ಷಿಕೆ ಮತ್ತು ಯೋಜನೆ / ಕಾರ್ಯಕ್ರಮದ ಹೆಸರು</th><th>ನಿಗದಿತ ಅನುದಾನ (ಲಕ್ಷ ರೂಗಳಲ್ಲಿ)</th></tr>
<tr><td>1</td><td>2435-00-101-0-34-ಕೃಷಿ ಕ್ಷೇತ್ರ ಮತ್ತು ಅಭಿವೃದ್ಧಿ ಕೇಂದ್ರಗಳು</td><td>1.50</td></tr>
<tr><td>2</td><td>2435-00-101-0-34-ಸಾವಯವ ಗೊಬ್ಬರಗಳು</td><td>5.00</td></tr>
<tr><td>3</td><td>2435-00-101-0-29-ಇತರೆ ಕೃಷಿ ಯೋಜನೆಗಳು</td><td>25.00</td></tr>
<tr><td>4</td><td>2435-00-101-0-33-ಕೃಷಿ ಕಛೇರಿ ಕಟ್ಟಡಗಳು</td><td>25.00</td></tr>
<tr><td>5</td><td>2435-00-101-0-31- ಬೇಸಾಯ ಸಂಬಂಧಿತ ಚಟುವಟಿಕೆಗಳು</td><td>10.00</td></tr>
<tr><td>6</td><td>2435-00-101-0-03-ಎಣ್ಣೆ ಬೀಜಗಳ ಉತ್ಪತ್ತಿ ಯೋಜನೆ</td><td>14.00</td></tr>
<tr><td>7</td><td>2435-00-101-0-30-ಹನಿ ನೀರಾವರಿ ಯೋಜನೆ</td><td>25.00</td></tr>
<tr><td></td><td>ಒಟ್ಟು</td><td>105.50</td></tr>
</table></td><td>ಸಭೆಯಲ್ಲಿ ಕೃಷಿ ಮತ್ತು ಕೈಗಾರಿಕೆ ಸ್ಥಾಯಿ ಸಮಿತಿಯ ವ್ಯಾಪ್ತಿಗೊಳಪಡುವ ವಿವಿಧ ಇಲಾಖೆಗಳ ಕ್ರಿಯಾ ಯೋಜನೆ ಕುರಿತಂತೆ ಸಮಗ್ರವಾಗಿ ಪರಿಶೀಲಿಸಲಾಯಿತು.<br>2012-13ನೇ ಸಾಲಿಗೆ ಸರ್ಕಾರದಿಂದ ಕಟ್ಟಡಗಳು ಯೋಜನೆಯಡಿ ಜಂಟಿ ಕೃಷಿ ನಿರ್ದೇಶಕರ ಕಛೇರಿಯ ನವೀಕರಣಕ್ಕೆ ನಿಗದಿಪಡಿಸಿರುವ ಅನುದಾನದಲ್ಲಿ ಶೇ.50ರಷ್ಟು ಅನುದಾನವನ್ನು ಜಂಟಿ ಕೃಷಿ ನಿರ್ದೇಶಕರ ಕಛೇರಿಗೆ ವಿನಿಯೋಗಿಸಿಕೊಂಡು ಉಳಿದ ಅನುದಾನವನ್ನು ಹಾನುಬಾಳು ಗ್ರಾಮದಲ್ಲಿ ರೈತ ಸಂಪರ್ಕ ಕೇಂದ್ರದ ನಿವೇಶನವನ್ನು ಮಟ್ಟ ಮಾಡಲು ವಿನಿಯೋಗಿಸಲು ಸಭೆಯಲ್ಲಿ ಸರ್ವಾನುಮತ ದಿಂದ ನಿರ್ಣಯಿಸಲಾಯಿತು.<br>2012-13ನೇ ಸಾಲಿಗೆ ಸರ್ಕಾರದಿಂದ ಯೋಜನಾ ಕಾರ್ಯಕ್ರಮಗಳಿಗೆ ಕೃಷಿ ಇಲಾಖೆಗೆ ನಿಗದಿಯಾಗಿರುವ ಅನುದಾನಕ್ಕೆ ಸಂಬಂಧಿಸಿದಂತೆ, ಸುದೀರ್ಘವಾಗಿ ಕ್ರಿಯಾ ಯೋಜನೆಯನ್ನು ಪರಿಶೀಲಿಸಿ ಸರ್ವಾನುಮತದಿಂದ ಅನುಮೋದನೆ ನೀಡಿ ನಿರ್ಣಯಿಸಲಾಯಿತು.</td></tr>
</table>

6) ಶ್ರೀಮತಿ ವಿ.ಪಿ.ಜ್ಯೋತಿ, ಸದಸ್ಯರು
7) ಶ್ರೀಮತಿ ಸರೋಜಮ್ಮ, ಸದಸ್ಯರು
8) ಮಾನ್ಯ ಅಧ್ಯಕ್ಷರು / ಉಪಾಧ್ಯಕ್ಷರು ಜಿಲ್ಲಾ ಪಂಚಾಯತ್, ಹಾಸನ ರವರ ಆಪ್ತ ಶಾಖೆಗೆ.
9) ಮಾನ್ಯ ಜಿಲ್ಲಾ ಪಂಚಾಯತ್ ಸದಸ್ಯರುಗಳಿಗೆ ಮಾಹಿತಿಗಾಗಿ.
10) ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾಸನ ರವರ ಆಪ್ತ ಶಾಖೆಗೆ ಮಾಹಿತಿಗಾಗಿ.
11) ಉಪ ಕಾರ್ಯದರ್ಶಿ (ಆಡಳಿತ) / ಮುಖ್ಯ ಲೆಕ್ಕಾಧಿಕಾರಿ / ಮುಖ್ಯ ಯೋಜನಾಧಿಕಾರಿ, ಜಿಲ್ಲಾ ಪಂಚಾಯತ್, ಹಾಸನ ರವರ ಆಪ್ತ ಶಾಖೆಗೆ ಮಾಹಿತಿಗಾಗಿ.
12) ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಹಾಸನ
13) ಹಿರಿಯ ಸಹಾಯಕ ನಿರ್ದೇಶಕರು, ಮೀನುಗಾರಿಕೆ ಇಲಾಖೆ, ಹಾಸನ
14) ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ, ಹಾಸನ.
15) ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ, ಜಲಾನಯನ ಇಲಾಖೆ, ಹಾಸನ
16) ಉಪ ನಿರ್ದೇಶಕರು, ತೋಟಗಾರಿಕೆ / ಕೈಮಗ್ಗ ಮತ್ತು ಜವಳಿ/ ರೇಷ್ಮೆ ಇಲಾಖೆ / ಪಶುಪಾಲನಾ ಇಲಾಖೆ / ಕೈಗಾರಿಕೆ ಇಲಾಖೆ, ಹಾಸನ.

(12–16) ಸಭೆಗೆ ಮಂಡಿಸುವ ಯಾವುದೇ ಇಲಾಖಾ ಪ್ರಸ್ತಾವನೆಗಳು ಇದ್ದಲ್ಲಿ ಅವುಗಳನ್ನು ಜಿಲ್ಲಾ ಪಂಚಾಯತ್ ಅಭಿವೃದ್ಧಿ ಶಾಖೆಗೆ ದಿನಾಂಕ 25-06-2012 ರೊಳಗಾಗಿ ಸಲ್ಲಿಸುವುದು.

17) ಸಹಕಾರ ಸಂಘಗಳ ಉಪ ನಿಬಂಧಕರು, ಹಾಸನ.

# ಜಿಲ್ಲಾ ಪಂಚಾಯತ್, ಹಾಸನ.

ಸಂ/ಜಿಪಂಹಾ/ಅಭಿ(3)/13/ಕೃಕೈಸ/2012-13 ದಿನಾಂಕ 22-06-2012.

## ಸಭಾಹ್ವಾನ ಪತ್ರ

ದಿನಾಂಕ **27-06-2012** ರಂದು ಬೆಳಿಗ್ಗೆ **11.00** ಗಂಟೆಗೆ ಶ್ರೀ ಹುಚ್ಚೇಗೌಡ, ಅಧ್ಯಕ್ಷರು, ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ, ಜಿಲ್ಲಾ ಪಂಚಾಯತ್, ಹಾಸನ ರವರ ಅಧ್ಯಕ್ಷತೆಯಲ್ಲಿ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ಸಭೆಯನ್ನು ಜಿಲ್ಲಾ ಪಂಚಾಯತ್ ಹೊಯ್ಸಳ ಸಭಾಂಗಣದಲ್ಲಿ ಕರೆಯಲಾಗಿದೆ.

ಆದುದರಿಂದ ಸದರಿ ಸಭೆಗೆ ತಾವುಗಳು ಹಾಜರಾಗಿ ಸಲಹೆ ಸಹಕಾರ ನೀಡಲು ಕೋರಲಾಗಿದೆ.

ಉಪ ಕಾರ್ಯದರ್ಶಿ(ಅಭಿವೃದ್ಧಿ),
ಹಾಗೂ ಕಾರ್ಯದರ್ಶಿ
ಕೃಷಿ ಮತ್ತು ಕೈಗಾರಿಕೆ ಸ್ಥಾಯಿ ಸಮಿತಿ,
ಜಿಲ್ಲಾ ಪಂಚಾಯತ್, ಹಾಸನ.

**ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳು:-**

1) ಹಿಂದಿನ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಪರಾಮರ್ಶೆ.
2) ವಿವಿಧ ಇಲಾಖೆಗಳ ಪ್ರಸ್ತಾವನೆಗಳಿಗೆ ಅನುಮೋದನೆ ನೀಡುವುದು.
3) ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು.

**ಪ್ರತಿಯನ್ನು:-**

1) ಶ್ರೀ ಹುಚ್ಚೇಗೌಡ, ಅಧ್ಯಕ್ಷರು, ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ, ಜಿಲ್ಲಾ ಪಂಚಾಯತ್, ಹಾಸನ.
2) ಶ್ರೀ ವಿ.ಎ.ನಂಜುಂಡಸ್ವಾಮಿ, ಸದಸ್ಯರು
3) ಶ್ರೀಮತಿ ಸುಭದ್ರ, ಸದಸ್ಯರು
4) ಶ್ರೀಮತಿ ಬಿ.ಜಯಶೀಲ ಜಯಶಂಕರ್, ಸದಸ್ಯರು
5) ಶ್ರೀಮತಿ ಸುಲೋಚನಾ ರಾಮಕೃಷ್ಣ, ಸದಸ್ಯರು

-2)